ಒಎಸ್ 98:14 ಪಿಡಬ್ಲ್ಯೂ-1 ಚಂದ್ರ ಶೇಖರ್
ದಿನಾಂಕ 10.06.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರಿದ ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ ಪಿಬಿಎಸ್ ವಕೀಲರಿಂದ

ನಿಪಿ-12 ಕರಾರು ಆಗುವ ಮೊದಲು ಆಗಲಿ ಅಥವಾ ಆನಂತರ ಆಗಲಿ ದಾವಾ ಸ್ವತ್ತನ್ನು ಅಳತೆ ಮಾಡಿಸಿಲ್ಲ. ದಾವಾ ಸ್ವತ್ತು ಪೋಡಿ ಆದ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೆ 11(ಇ) ರೆವಿನ್ಯೂ ನಕ್ಷೆ ಅಗತ್ಯ ಇರುವ ಬಗ್ಗೆ ನನಗೆ ಗೊತ್ತಿಲ್ಲ. ವೆಂಕಟೇಶ ಹೊಳ್ಳ ರವರು ಇಂದಿರಾ ಹೊಳ್ಳ ರವರಿಗೆ ಅಧಿಕಾರ ಪತ್ರ ಬರೆದುಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-12ರ ಕಂಡಿಕೆ 4 ಅ( iv) ರಲ್ಲಿ ನಮೂದಿಸಿರುವ ಮಾಲಿಕತ್ವ ಮತ್ತು ಸ್ವಾಧಿನಕಕ್ಕೆ ಸಂಬಂದಪಟ್ಟ ಅವಶ್ಯಕವೆಂದು ಕಂಡು ಬರುವ ಇನ್ನಿತರ ದಾಖಲೆಗಳ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ಪ್ರತಿವಾದಿಯು ಬ್ಯಾಂಕಿಗೆ ಅಥವಾ ಸಂಘಗಳಿಗೆ ಅಧಾರ ಮಾಡಿ ಸಾಲ ಪಡೆದ ಬಗ್ಗೆ ನನಗೆ ಗೊತ್ತಿಲ್ಲ.

ನಾನು ಡಿಗ್ರಿ ಓದಿದ್ದೇನೆ ಆದರೆ ಪಾಸಾಗಿಲ್ಲ. ನಾನು ವಿದ್ಯಾಬ್ಯಾಸ ಆದನಂತರ ಮಂಗಳೂರಿನ ಎ.ಜೆ ಶೆಟ್ಟಿ ಕಂಪೆನಿಯಲ್ಲಿ ಸುಮಾರು ಹದಿನೇಳು ವರ್ಷ ಕೆಲಸ ಮಾಡಿದ್ದೇನೆ. ಆನಂತರ ಪರಂಗೀಪೇಟೆಯಲ್ಲಿ ಎರಡು ವರ್ಷಗಳ ಕಾಲ ಪೆಂಟ್ ಅಂಗಿಡಿಯನ್ನು ಇಟ್ಟುಕೊಂಡಿದ್ದೇನು. ನಾನು ನೆತ್ತರಕೆರಯಲ್ಲಿ ಮನೆ ಕಟ್ಟುವ ಮೊದಲು ಮಂಗಳೂರಿನಲ್ಲಿ ಪ್ಲಾಟ್ ನಲ್ಲಿ ಇದ್ದೆ ಎಂದರೆ ಸರಿ . ಸಾಕ್ಷಿ ಮುಂದುವರಿದು ಆದರೆ ಅದು ಬಾಡಿಗೆ ಇದ್ದೆ ಎಂದು ಹೇಳುತ್ತಾರೆ. ನಾನು ಮನೆ ಕಟ್ಟಿ ಒಂಭತ್ತು ವರ್ಷ ಅಯಿತು. ಸದರಿ ಮನೆ ಇರುವ ಜಾಗವು ನನ್ನ ಹಿರಿಯರಿಂದ ವಿಭಾಗ ಪತ್ರದ ಮೂಲಕ ಬಂದಿರುತ್ತದೆ. ನನಗೆ ವಿಭಾಗದಲ್ಲಿ ಸಮಾರು 80 ಸೆಂಟ್ಸ್ ಜಾಗ ಬಂದಿದೆ. ಸದರಿ ಆಸ್ತಿಗಳ ಪೈಕಿ ನನಗೆ ಸೇರಿದ 56 ಸೆಂಟ್ಸ್ ಜಾಗವು ದಾವಾ ಸ್ವತ್ತಿಗೆ ಲಗತ್ತಾಗಿದೆ. ದಾವಾ ಸ್ವತ್ತು ಸಮತಟ್ಟಾಗಿಲ್ಲ. 2012 ರಲ್ಲಿ ದಾವಾ ಸ್ವತ್ತಿಗೆ ಉಪನೋಂದಣಾಧಿಕಾರಿಯವರ ಮಾರುಕಟ್ಟೆ ಬೆಲೆ 1 ಸೇಂಟ್ಸ್ ಗೆ ಸುಮಾರು 2 ರಿಂದ 3 ಸಾವಿರ ರೂಪಾಯಿ ಇರಬಹುದು. ನಿಪಿ-12 ಕರಾರು ಆಗುವ ಮೊದಲು ದಾವಾ ಸ್ವತ್ತಿನ ಮಾರುಕಟ್ಟೆ ಬೆಲೆಯನ್ನು ನಾನು ಸದರಿ ಕಚೇರಿಯಲ್ಲಿ ಪರೀಶಿಲನೆ ಮಾಡಿರುವುದಿಲ್ಲ.

ಪ್ರತಿವಾದಿ ನನಗೆ ಬಾಲ್ಯದಿಂದ ಪರಿಚಯವಿರುತ್ತಾರೆ. ಅವರು 7ನೇ ತರಗತಿ ವರಗೆ ವಿದ್ಯಾಭ್ಯಾಸಕ್ಕೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರು ಹೆಚ್ಚು ಕಲಿತಿದ್ದಾರೆ, ಆದರ ಎಷ್ಟು ಓ ದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾವಾ ಸ್ವತ್ತನ್ನು ಹೊರತುಪಡಿಸಿ ಪ್ರತಿವಾದಿಯರ ಬಳಿ ಬೇರೆ ಯಾವುದೇ ಆಸ್ತಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರಿಗೆ ಯಾವುದೇ ಉದ್ಯೋಗ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ಬಡತನವನ್ನು ಉಪಯೋಗಿಸಿಕೊಂಡು ದಾವಾ ಸ್ವತ್ತನ್ನು ಅತಿ

ಕಡಿಮೆ ಬೆಲೆಗೆ ಖರೀದಿ ಮಾಡಲು ನಿಪಿ-12 ಕರಾರನ್ನು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಕರಾರು ಆಗುವ ಸಮಯದಲ್ಲಿ ದಾವಾ ಸ್ವತ್ತಿಗೆ 1 ಸೆಂಟ್ಸ್ ಗೆ 1 ಲಕ್ಷ ಬೆಲೆ ಇತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ನಿಪಿ-12 ಕರಾರನ್ನು ಅನ್ಯಾಯದಿಂದ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ನಿಪಿ-12 ಕರಾರನ್ನು ದಂಡ ಪಾವತಿ ಮಾಡಿ ಪತ್ರದ ಮುಖಾಂತರ ರದ್ದು ಪಡಿಸಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಪ್ರತಿವಾದಿ ಅದನ್ನು ಏಕಪಕ್ಷಿಯವಾಗಿ ಮಾಡಿಕೊಂಡಿದ್ದಾರೆ ಎಂದು ನುಡಿದಿರುತ್ತಾರೆ. ನಾನು ಯಾವಾಗಲೂ ನಿಪಿ-12 ಕರಾರಿನಂತೆ ನಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಯಾವತ್ತೂ ಕ್ರಯ ಪತ್ರ ಮಾಡಿಸಿಕೊಳ್ಳಲು ಸಿದ್ದವಿರಲಿಲ್ಲ ಎಂದರೆ ಸರಿಯಲ್ಲ.

ನಿಪಿ-12 ಕರಾರು ಆದ ನಂತರ ಪ್ರತಿವಾದಿಯು ದಾವಾ ಸ್ವತ್ತನ್ನು ಮಾರಾಟ ಮಾಡಲು ಪ್ರಯತ್ನ ಪಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ದಾವಾ ಸ್ವತ್ತನ್ನು ನನಗಿಂತ ಹೆಚ್ಚಿನ ಮೌಲಕ್ಕೆ ಮಾರಾಟ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ ಎಂದು ನಮ್ಮ ಊರಿನಲ್ಲಿ ಮಾತನಾಡಿಕೊಂಡಿದ್ದರು. ಆಗ ಮಾತನಾಡುತ್ತಿದ್ದ ವ್ಯಕ್ತಿಗಳ ಹೆಸರುಗಳನ್ನು ನನಗೆ ಹೇಳಲಾಗುವುದಿಲ್ಲ. ನಾನು ಪ್ರತಿವಾದಿಯ ವಿರುದ್ದ ಸುಳ್ಳು ಅಪಾದನೆಗಳನ್ನು ಮಾಡಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಪೂರ್ವಕ್ಕೆ ಹರಿದಾಸ ರವರ ಸ್ವತ್ತು, ಪಶ್ಚಿಮಕ್ಕೆ ಜೂಲಿಯಾನ ರವರು ಸ್ವತ್ತು, ದಕ್ಷಿಣಕ್ಕೆ ನನ್ನ ಸ್ವತ್ತು, ಉತ್ತರಕ್ಕೆ ಈ ಹಿಂದೆ ಮುಂದಪ್ಪ ಬಂಗೇರ ರವರ ಸ್ವತ್ತು ಇದ್ದು ಈಗ ಅದನ್ನು ಅವರು ಮಾರಾಟ ಮಾಡಿದ್ದಾರೆ. ನಿಪಿ-12 ಕರಾರು ಆಗುವ ಕಾಲಕ್ಕೆ ಮೇಲೆ ಹೇಳಿದ ಚಕ್ಕು ಬಂದಿಯ ಮಾಹಿತಿಯನ್ನು ನಾನು ನನ್ನ ವಕೀಲರಿಗೆ ನೀಡಿಲ್ಲ. ನಾನು ವ್ಯಾಜ್ಯದಲ್ಲಿ ಕೇಳಿದ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್‌ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಬಂಟ್ವಾಳ, ದ.ಕ.